# ಆದಾಯದಲ್ಲಿ ಐಟಿಗಿಂತಲೂ ಆಯುರ್ವೇದ ಮೇಲು !

ಬೆಂಗಳೂರು,ಮಾ.10- ಉತ್ತಮ ರೀತಿಯಲ್ಲಿ ನಿರ್ವಹಣೆ ಮಾಡಿದಲ್ಲಿ ಈಗ ಐಟಿ ಕ್ಷೇತ್ರದಿಂದ ಗಳಿಸುತ್ತಿರುವ ಮೊಬಲಗಿಂತಲೂ ಹೆಚ್ಚಿನ ಮೊತ್ತವನ್ನು ಆಯುರ್ವೇದದಿಂದ ಸಂಪಾದಿಸಬಹುದು.ಅದೇ ರೀತಿ ಆಯುರ್ವೇದವನ್ನು ಮತ್ತು ಅದರ ಮಹತ್ವವನ್ನು ಭಾರತೀಯರಿಗಿಂತಲೂ ಹೆಚ್ಚಾಗಿ ವಿದೇಶಿಯರು ಅರಿತುಕೊಳ್ಳುತ್ತಿದ್ದಾರೆ.

ಭಾರತೀಯರು ಆಯುರ್ವೇದವನ್ನು ಸಂರಕ್ಷಿಸಿಕೊಳ್ಳದೇ ಹೋದರೆ ಅಮೇರಿಕನ್ನರು ಇದನ್ನು ವಾಣಿಜ್ಯೀಕರಣಗೊಳಿಸುತ್ತಾರೆ ಎಂದು ಅಮೇರಿಕಾದ ಮೆರಿಲ್ಲಾ ಹೋಮನ್ಸ್‌ಬರ್ಗ್ ತಿಳಿಸಿದರು.ಅವರು ಆಯುರ್ವೇದ ಸ್ಪರ್ಷ ತರಬೇತಿಯನ್ನು ನೀಡುತ್ತಾರೆ.

ಆಯುರ್ವೇದ ಚಿಕಿತ್ಸಾ ಕೇಂದ್ರ ಅರ್ಥ್ ಆಯೋಜಿಸಿದ್ದ ಐದನೇ ವಾರ್ಷಿಕೋತ್ಸವ ಸಂದರ್ಭದಲ್ಲಿ ಅವರು ಈ ವಿಷಯವನ್ನು ತಿಳಿಸಿದರು.

ಶೀತ ವಾತಾವರಣದಿಂದ ಉಷ್ಣವಾತಾವರಣಕ್ಕೆ ಪ್ರಯಾಣವನ್ನು ಹಮ್ಮಿಕೊಂಡಾಗ, ಚಳಿಗಾಲ ಕಳೆದು ಬೇಸಿಗೆ ಬಂದಾಗ ಹಲವಾರು ರೀತಿಯ ತೊಂದರೆಗಳು ಕಾಣಿಸಿಕೊಳ್ಳುತ್ತವೆ.ಇದಕ್ಕೆ ಬೇರೆ ಯಾವುದೇ ಚಿಕಿತ್ಸೆಗಿಂತಲೂ ಆಯುರ್ವೇದ ಅತ್ಯುತ್ತಮ ಪರಿಹಾರವಾಗಿದೆ.ಅದೇ ರೀತಿಯೇ



ಮಧುಮೇಹ ಇಂದು ದೇಶದ ಬಹು ಭಾಗಗಳಲ್ಲಿ ಕಾಣಿಸಿಕ್ಕುವ ರೋಗವಾಗಿದೆ. ಇದಕ್ಕೆ ತಾತ್ಕಾಲಿಕ ಶಮನಕ್ಕಿಂತಲೂ ರೋಗಮುಕ್ತತೆಗೆ ಸೂಕ್ತ ಪರಿಹಾರ ಅಗತ್ಯವಾಗುತ್ತದೆ.

ಅದಕ್ಕೆ ಆಯುರ್ವೇದ ನೆರವನ್ನು ನೀಡುತ್ತದೆ ಎಂದು ಅರ್ಥ್‌ನ ವೈದ್ಯಕೀಯ ನಿರ್ದೇಶಕ ಡಾ.ಪ್ರಶಾಂತ್ ಆಚಾರ್ಯ ತಿಳಿಸಿದರು. ಅವರು ಮುಂದುವರಿದುಆಯುರ್ವೇದ 'ದಲ್ಲಿ ಬಳಸಲಾಗುವ ಗಿಡಮೂಲಿಕೆಗಳು ದುರ್ಲಭವಾಗಿರುತ್ತವೆ ಮತ್ತು ದುಬಾರಿಯೂ ಆಗಿರುತ್ತದೆ.ಈ ಕಾರಣದಿಂದಲೇ ಈ ಚಿಕಿತ್ಸೆ ಸಾಮಾನ್ಯ ಚಿಕಿತ್ಸೆಗಳಿಗಿಂತಲೂ ಸ್ವಲ್ಪ ಹೆಚ್ಚಿನ ಮೊತ್ತವನ್ನು ಆಶಿಸುತ್ತದೆ.

ಇದು ಜನಸಾಮಾನ್ಯರಿಗೂ ದೊರಕುವಂತೆ ಮಾಡುವ ಉದ್ದೇಶದಿಂದ ಅರ್ಥ್ ದೊಡ್ಡಬಳ್ಳಾಪುರದ ಸಮೀಪ 200 ಹಾಸಿಗೆಗಳ ಸೌಲಭ್ಯವುಳ್ಳ ಆಸ್ಪತ್ರೆಯನ್ನು ಇನ್ನು 5-6 ತಿಂಗಳುಗಳಲ್ಲಿ ಆರಂಭಿಸಲಿದೆ.

ಇದಕ್ಕಾಗಿ ಸುಮಾರು ಹತ್ತು ಎಕರೆ ಜಾಗದಲ್ಲಿ ಅಭಿವೃದ್ಧಿ ಕಾರ್ಯಗಳು ನಡೆದಿದ್ದು ಆಯುರ್ವೇದಕ್ಕೆ ಅಗತ್ಯವಿರುವ ಪ್ರಾಥಮಿಕ ಸೌಲಭ್ಯಗಳು ದೊರಕುವಂತೆ ಮಾಡಿಕೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಅರ್ಥ್‌ನ ವ್ಯವಸ್ಥಾಪಕ ನಿರ್ದೇಶಕ ರಜತ್ ಗುಪ್ತಾ,ವೈದ್ಯಕೀಯ ನಿರ್ದೇಶಕ ಪ್ರಶಾಂತ್ ಆಚಾರ್ಯ ಮತ್ತು ಸ್ಪರ್ಷ ತರಬೇತಿಯ ಪ್ರತಿನಿಧಿ ಮೆರಿಲ್ಲಾ ಹೊಮನ್‌ಬರ್ನ್ಸ್ ಹಾಜರಿದ್ದರು.